3 ಬಾರಿಯ ಮನವಿಗೂ ಸ್ಪಂದಿಸದ ಕೇಂದ್ರ: ಪರಮೇಶ್ವರ್ ಗರಂ

ಬೆಂಗಳೂರು: ಕೇಂದ್ರ ಸರ್ಕಾರದಿಂದ ಪರಿಹಾರ ಪಡೆಯುವ ಸಂಬಂಧ ಈಗಾಗಲೇ ಮೂರು ಬಾರಿ ಮನವಿ ಸಲ್ಲಿಸಿದರೂ ಕೇಂದ್ರದಿಂದ ಸ್ಪಂದನೆ ಇಲ್ಲ ಎಂದು ಡಿಸಿಎಂ ಡಾ. ಜಿ. ಪರಮೇಶ್ವರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಮನವಿ ಸಲ್ಲಿಸಿದ ಬಳಿಕ ಕೇಂದ್ರದ ಕೃಷಿ ಸಚಿವರು, ಗೃಹ ಸಚಿವರು ಹಾಗೂ ಪ್ರಧಾನಿ ಕಚೇರಿಗೆ ಭೇಟಿ ಮಾಡಲು ಸಮಯಾವಕಾಶ ಕೋರಿದ್ದೇವೆ. ಖುದ್ದಾಗಿ ಭೇಟಿ ಮಾಡಿ ರಾಜ್ಯದ ಪರಿಸ್ಥಿತಿಯನ್ನು ವಿವರಿಸಿ, ರೈತರಿಗೆ ಪರಿಹಾರ ಒದಗಿಸುವಂತೆ ಮನವಿ ಮಾಡುವುದು ನಮ್ಮ ಉದ್ದೇಶವಾಗಿತ್ತು. ಆದರೆ, ಈವರೆಗೂ ಯಾರಿಂದಲೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದರು.

ಸ್ಟಾರ್ಟಪ್ ಪಾರ್ಕ್: ಎಂಬಿಪಾ

ಒಂದು ಸಾವಿರ ಎಕರೆಯಲ್ಲಿ ಪಾರ್ಕ್ ನಿರ್ಮಾಣ
ನವೋದ್ಯಮಗಳಿಗೆ ಹೆಚ್ಚುವರಿ 5% ಸಹಾಯಧನ



ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ನವೋದ್ಯಮಗಳಿಗೆ ಮತ್ತಷ್ಟು ಉತ್ತೇಜನ ನೀಡಲು ಬೆಂಗಳೂರು ಸಮೀಪ ಒಂದು ಸಾವಿರ ಎಕರೆ ವಿಸ್ತಾರದ ಮತ್ತು ಹುಬ್ಬಳ್ಳಿ–ಧಾರವಾಡ ಸಮೀಪ 100–200 ಎಕರೆ ವಿಸ್ತಾರದ ಮಾದರಿಯಾದ ಸ್ಟಾರ್ಟಪ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಬೆಂಗಳೂರು ತಂತ್ರಜ್ಞಾನ ಸಮಾವೇಶದಲ್ಲಿ ಮಾತನಾಡಿ, ಬೆಂಗಳೂರಿ ನಲ್ಲಿ ಭೂಮಿಯ ಬೆಲೆ ಗಗನಕ್ಕೇರಿದ್ದು, ಆದಷ್ಟು ಕಡಿಮೆ ಬೆಲೆಗೆ ಭೂಮಿ ಕೊಡಿಸಿದರೆ ಒಳ್ಳೆಯದೆಂದು ಕೆಲವು ನವೋದ್ಯಮಿಗಳು ಗಮನ ಸೆಳೆದಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲು ರಾಜ್ಯದ ಎರಡೂ ಭಾಗಗಳಲ್ಲಿ ಇಂತಹ ಸ್ಟಾರ್ಟಪ್ ಪಾರ್ಕ್ಸ್ ಸ್ಥಾಪಿಸುವ ಚಿಂತನೆ ನಮ್ಮ ಮುಂದಿದೆ. ಯಾವ ರೀತಿ ಅನುಕೂಲ ಮಾಡಬಹುದು ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ಮುಂದಿನ ಹೆಜ್ಜೆ ಇಡಲಾಗುವುದು ಎಂದು ಹೇಳಿದರು.

ಪ್ರತಿಯೊಂದಕ್ಕೂ ಉದ್ಯಮಿಗಳೇ ಹಣ ಹಾಕುವುದು ಕಷ್ಟವಾಗುತ್ತದೆ ಎನ್ನುವುದು ಸರಕಾರಕ್ಕೆಗೊತ್ತಿದೆ. ಉದ್ದೇಶಿತ ಸ್ಟಾರ್ಟಪ್ ಪಾರ್ಕ್‌ಗಳಲ್ಲಿ ಕೈಗಾರಿಕಾ ನಿವೇಶನ ಗಳನ್ನು ಲೀಸ್ ಕಂ ಸೇಲ್ ಅಥವಾ ಬೇರೆ ಯಾವ ಸ್ವರೂಪದಲ್ಲಿ ನೀಡ ಬಹುದು ಎನ್ನುವುದನ್ನು ಕುರಿತು ಚಿಂತಿಸಲಾಗುವುದು. ಜತೆಗೆ ಬೆಂಗಳೂರಿ ನಿಂದ ಹೊರಗಿರುವ (ಬಿಯಾಂಡ್ ಬೆಂಗಳೂರು) ನವೋದ್ಯಮಗಳಿಗೆ ಈಗ ಕೊಡುತ್ತಿರುವುದಕ್ಕಿಂತ ಹೆಚ್ಚುವರಿಯಾಗಿ ಶೇ.5ರಷ್ಟು ಸಹಾಯಧನ ಕೊಡುವ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಸಂವಾದದಲ್ಲಿ ಸ್ಪೆಷಲ್ ಇನ್ವೆಸ್ಟ್ ಕಂಪನಿಯ ಅರ್ಜುನ್‌ರಾವ್, ಸ್ಯಾಮ್ಸಂಗ್ ವೆಂಚರ್ಸ್ ಪಾಲುದಾರ ರೋಹನ್ ಶೆಟ್ಟಿ, ಅಕ್ಷಯಕಲ್ಪ ಸಂಸ್ಥೆಯ ಶಶಿಕುಮಾರ್, ಕ್ಯೂಪೈ–ಎಐ ಸಂಸ್ಥಾಪಕರಾದ ನಾಗೇಂದ್ರ ಮತ್ತು ನಾಗರಾಜ, ಸಿಂಪ್ಲಿಫೈ ನಿರ್ದೇಶಕ ಸುಮಂತ್ ಕೃಷ್ಣ ಸೇರಿದಂತೆ 23 ಕಂಪನಿಗಳ ಪ್ರಮುಖರು ಪಾಲ್ಗೊಂಡಿದ್ದರು. ಉದ್ಯಮಿ ಮದನ್ ಪದಕಿ, ಬೃಹತ್ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತರಾದ ಖಿಷ್ಪು ಗೋಯಲ್ ಮತ್ತಿತರರಿದ್ದರು.

ಜೈನ್ ವಿಶ್ವವಿದ್ಯಾಲಯ ಘಟಿಕೋತ್ಸವ

ಸಂ.ಕ.ಸಮಾಚಾರ, ಬೆಂಗಳೂರು



ಜೀವನದಲ್ಲಿ ಒತ್ತಡ, ನಿರಾಸೆ ಮತ್ತು ಅನಿಶ್ಚಿತತೆ ಎದುರಾಗುವುದು ಸಹಜ. ಇಂತಹ ಸನ್ನಿವೇಶಗಳೇ ವ್ಯಕ್ತಿತ್ವ ವಿಕಸನಕ್ಕೆ ಹಾಗೂ ಪರಿವರ್ತನೆಗೆ ಅವಕಾಶ ಕಲ್ಪಿಸುತ್ತವೆ. ವಿದ್ಯಾರ್ಥಿಗಳು ತಮ್ಮದೇ ಆದ ಮೌಲ್ಯ ಮತ್ತು ತತ್ವಗಳನ್ನು ರೂಪಿಸಿಕೊಂಡು ಗುರಿಯತ್ತ ಸಾಗಬೇಕೆಂದು ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಚೆನರಾಜ್ ರಾಯಚಂದ್ ತಿಳಿಸಿದರು.

ಜೈನ್ (ಡೀಮ್ಡ್ ಟು ಬಿ ಯೂನಿವರ್ಸಿಟಿ)ಯ 16ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೆಂಟೋಮೋಜೋ ಮತ್ತು ಲಿಕ್ವಿಟೋನ್ಸ್ ಸಂಸ್ಥೆಗಳ ಸಹ–ಸಂಸ್ಥಾಪಕ ಅಚಿಲ್ ಮಿತ್ತಲ್, ವಿದ್ಯಾರ್ಥಿಗಳು ಪರಿಪೂರ್ಣತೆಯ ನಿರೀಕ್ಷೆಯಲ್ಲಿ ಅವಕಾಶಗಳನ್ನು ಮುಂದೂಡಬಾರದು. ಅನಿಶ್ಚಿತತೆಗಳನ್ನು ಸ್ವೀಕರಿಸಿ, ಮೊದಲ ಹೆಜ್ಜೆ ಇಡುವ ಧೈರ್ಯ ಬೆಳೆಸಿಕೊಳ್ಳಬೇಕು. ದೊಡ್ಡ ಕನಸುಗಳನ್ನು ಕಾಣುವುದರ ಜತೆಗೆ ಕಠಿಣ ಪರಿಶ್ರಮದಿಂದ ಅವುಗಳನ್ನು ಸಾಕಾರಗೊಳಿಸಬೇಕು. ಯಶಸ್ಸಿನ ಬೆನ್ನಟ್ಟುವಾಗ ಜೀವನದ ಪ್ರಯಾಣವನ್ನು ಆನಂದಿಸುವುದನ್ನೂ ಮರೆಯಬಾರದು ತಿಳಿಸಿದರು.

ಭಾರತೀಯ ಜೈನ್ ಸಂಘಟನೆಯ (ಬಿಜೆಎಸ್) ಸಂಸ್ಥಾಪಕ ಶಾಂತಿಲಾಲ್ ಗುಲಾಬಚಂದ್ ಮುತ್ಥಾ ಅವರಿಗೆ ಸಮಾಜ ಸುಧಾರಣೆ ಮತ್ತು ದೇಶಾದ್ಯಂತ ಪುನರ್ವಸತಿ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಹಾಗೂ ನಾಯಕತ್ವವನ್ನು ಗುರುತಿಸಿ ವಿಶ್ವವಿದ್ಯಾಲಯದ ವತಿಯಿಂದ ಗೌರವ ಡಾಕ್ಟರ್ ಆಫ್ ಲೆಟರ್ಸ್ ಪದವಿ ಪ್ರದಾನ ಮಾಡಲಾಯಿತು.



ವಿಧಾನಸೌಧದ ಮುಖ್ಯಮಂತ್ರಿ ಕಚೇರಿಯಲ್ಲಿ ಬುಧವಾರ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭಾರತದಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಇರಾನ್ ರಾಯಭಾರಿ ಕಚೇರಿಯ ಅಲಿ ನಸ್ರೊಲ್ಲಾ ತಬರ್, ಮೊಜ್ತಬಾ ಖಾಜೈ, ಅಲಿ ಅಸ್ಗರ್ ತಬವರ್, ಬಾಬರ್ ಅಲಿ ಇದ್ದರು.

ಇಂದಿನ ಕಾರ್ಯಕ್ರಮ: 19–11–2026, ಗುರುವಾರ

ಬೆಳಗ್ಗೆ: ಶ್ರೀಗುರು ರಾಘವೇಂದ್ರ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಶ್ರೀವಾದಿಸಿಂಹಾಚಾರ್ಯರಿಂದ ವಿಜಯ ದಾಸರ ಸುಳಾದಿಗಳು ವಿಷಯವಾಗಿ ಧಾರ್ಮಿಕ ಪ್ರವಚನ. ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳ ಮಠ, ಪ್ರಕಾಶನಗರ. 9.00

ನಗರಾಭಿವೃದ್ಧಿ ಇಲಾಖೆ: ರಾಜ್ಯದ ವಿವಿಧ ನಗರಗಳಲ್ಲಿ ನೂತನವಾಗಿ ನಿರ್ಮಿಸಿರುವ 16 ಇಂದಿರಾ ಕ್ಯಾಂಟೀನ್‌ಗಳ ಲೋಕಾರ್ಪಣೆ. ರಾಜ್ಯಮಟ್ಟದ ಅತ್ಯುತ್ತಮ ಇಂದಿರಾ ಕ್ಯಾಂಟೀನ್ ಪ್ರಶಸ್ತಿ ಪ್ರದಾನ ಸಮಾರಂಭ. ಉದ್ಘಾಟನೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಅತಿಥಿ: ವಿಪಕ್ಷ ನಾಯಕ ಆರ್.ಅಶೋಕ. ಸ್ಥಳ: ಜವಾಹರ್ ಲಾಲ್ ನೆಹರು ತಾರಾಲಯ. 10.00

ಕರ್ನಾಟಕ ರಾಜ್ಯ ಸಹಕಾರ ಮಂಡಳ: 73ನೇ ಸಹಕಾರ ಸಪ್ತಾಹ. ಉದ್ಘಾಟನೆ: ಶಾಸಕ ಜಿ.ಟಿ ದೇವೆಗೌಡ, ಮುಖ್ಯಅತಿಥಿ: ಶಾಸಕ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಬೆಂಗಳೂರು ನಗರ ಜಿಲ್ಲಾ ಸಹಕಾರ ಅಧ್ಯಕ್ಷ ಎಸ್.ರವಿ. ಸ್ಥಳ: ಮರುದೇವಗೌಡ ಸಭಾಂಗಣ, ಜಯನಗರ. 11.00

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಚುನಾಯಿತ ಆಡಳಿತ ಮಂಡಳಿಗೆ ವರ್ಷದ ಸಂಭ್ರಮ. ಮುಖ್ಯಅತಿಥಿ: ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಪಿ ತ್ಯಾಗರಾಜ, ಅಧ್ಯಕ್ಷತೆ: ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು. ಸ್ಥಳ: ಕೆಯುಡಬ್ಲ್ಯೂಜೆ ಸಭಾಂಗಣ, ಕಂದಾಯ ಭವನ. 11.00

ಸಂಜೆ: ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ: ದಾಸವಾಣಿ ಕಾರ್ಯಕ್ರಮ. ಗಾಯನ: ಕೀರ್ತಿ ಬೆಳವಾಡಿ ಮತ್ತು ಅಪೂರ್ವ ಸಂದೀಪ್, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಋತುಪರ್ಣ ದೇಸಾಯಿ. ಸ್ಥಳ: ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ. 5.15

ಡಾ. ಎಸ್.ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ: ವಿದ್ಯಾಶಂಕರ ಪ್ರಶಸ್ತಿ ಪುರಸ್ಕಾರ ಸಮಾರಂಭ. ಸಾನ್ನಿಧ್ಯ: ಶ್ರೀವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿ, ಅಧ್ಯಕ್ಷತೆ: ಡಾ.ಎಸ್.ವಿ ಸಾಂ. ಪ್ರತಿಷ್ಠಾನದ ಅಧ್ಯಕ್ಷ ಡಾ.ನೆಲ್ಲೂರು ಪ್ರಸಾದ್ ಆರ್.ಕೆ. ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ. 5.30

ಪ್ರಕಾಶನಗರದ ಶ್ರೀರಾಘವೇಂದ್ರ ಸ್ವಾಮಿಗಳ ಮಠ: ಡಾ.ರಾಘಶ್ರೀ ಎಸ್. ಭಾರದ್ವಾಜ್ ಅವರ ನೇತೃತ್ವದಲ್ಲಿ ಕಲೆಗಳ ಉತ್ಸವ ಸ್ಕೂಲ್ ಆಫ್ ಪರ್ಫಾರ್ಮೆಯಿಂಗ್ ಆರ್ಟ್ಸ್‌ನ ಸದಸ್ಯರುಗಳಿಂದ ನೃತ್ಯಾರ್ಪಣ ಕಾರ್ಯಕ್ರಮ. ಸ್ಥಳ: ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ. 6.45

ವಿಜಯ ಸೌಹಾರ್ದ ಸಹಕಾರಿಯ 76ನೇ ಶಾಖೆಗೆ ಬಿಎಸ್‌ವೈ ಚಾಲನೆ

ಸಂ.ಕ.ಸಮಾಚಾರ, ಬೆಂಗಳೂರು



ನಗರದ ಸಹಕಾರ ನಗರದಲ್ಲಿ ವಿಜಯ (ಎಂ.ಆರ್.ಎನ್) ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘದ 76ನೇ ಶಾಖೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದರು.

ಉತ್ತರ ಕರ್ನಾಟಕದ ಹೆಮ್ಮೆಯ ಸಹಕಾರಿ ಸಂಸ್ಥೆಯಾಗಿರುವ ವಿಜಯ ಸೌಹಾರ್ದ ಕ್ರೆಡಿಟ್ ಸಹ ಕಾರಿ ಸಂಘವು ಎಂ.ಆರ್.ಎನ್. ಉದ್ಯೋಗ ಸಮೂಹದ ಸಂಸ್ಥಾಪಕ ಅಧ್ಯಕ್ಷ ಮುರುಗೇಶ ನಿರಾಣಿ ಅವರ ಮಾರ್ಗದರ್ಶನದಲ್ಲಿ ರಾಜ್ಯಾದ್ಯಂತ ವಿಸ್ತರಣೆಗೊಂಡಿದೆ. 2007ರ ನ.18 ರಂದು ಮುಧೋಳದಲ್ಲಿ 400 ಸದಸ್ಯರು ಹಾಗೂ 10 ಲಕ್ಷ ಷೇರು ಬಂಡವಾಳ ದೊಂದಿಗೆ ಆರಂಭವಾದ ಸಂಸ್ಥೆ ಇಂದು 2.50 ಲಕ್ಷಕ್ಕೂ ಅಧಿಕ ಸದಸ್ಯರನ್ನು ಹೊಂದಿದೆ.

ರಾಜ್ಯಾದ್ಯಂತ 76 ಶಾಖೆಗಳನ್ನು ಹೊಂದಿರುವ ಸಹಕಾರಿಯು ಮುಂದಿನ ದಿನಗಳಲ್ಲಿ 125 ಶಾಖೆಗಳನ್ನು ತೆರೆಯುವ ಗುರಿ ಹೊಂದಿದೆ. ಸಂಸ್ಥೆಯು ಪ್ರಸ್ತುತ 4 ಸಾವಿರ ಕೋಟಿ ಠೇವಣಿ ಸಂಗ್ರಹಿಸಿದ್ದು ವಿವಿಧ ಮಾದರಿಗಳಲ್ಲಿ 3,200 ಕೋಟಿ ಸಾಲ ವಿತರಿಸಿದೆ. 2025–26ನೇ ಹಣ ಕಾಸು ವರ್ಷದಲ್ಲಿ 65 ಸಾವಿರ ಕೋಟಿ ಜಮಾ–ಖರ್ಚಿನ ವ್ಯವಹಾರ ನಡೆಸಿದೆ. ಸದಸ್ಯರಿಗೆ ಪ್ರತಿವರ್ಷ ಶೇ.18ರಷ್ಟು ಲಾಭಾಂಶ ಹಂಚಿಕೆ ಮಾಡುತ್ತಿದೆ. ಸಂಸ್ಥೆಯ ಎಲ್ಲ ಶಾಖೆಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿದ್ದು, ಸುಮಾರು 500 ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಹಕರಿಗೆ ಎಟಿಎಂ, ಆನ್‌ಲೈನ್ ಬ್ಯಾಂಕಿಂಗ್, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಸೇಫ್ ಲಾಕರ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಜೀವ ವಿಮೆ ಹಾಗೂ ಅಪಘಾತ ವಿಮೆ ಸೌಲಭ್ಯವನ್ನೂ ಸದಸ್ಯರಿಗೆ ಕಲ್ಪಿಸಲಾಗಿದೆ.

PUBLIC NOTICE

My client 1).**Sri.UADARAM, 2).Smt.MANJU DEVI, 3).Smt.MAMTA, 4).Smt.GANITA** are intended to purchase the below said schedule property from Sri.K.S.SHIVARAMSA @ K.S.SHIVA RAM is the Owner of the schedule property, and 1).Sri.H.B.BOREGOWDA, & 2).Sri.H.HOMBALAIAH are confirming parties of the schedule property, if anybody having any valid claim, demand or interest over the said property or any objections to the said transaction by my clients may file his/her/their objections in writing along with copies of the supporting documents duly attested with the undersigned within 15 days from this day, failing which it will be deemed that no other person/s has any claim or agreement to sell or DTD or charge lien, otherwise or objections to the said transaction of the schedule property by my clients and my clients will complete the registration of the sale deed as if there is no such claim.

SCHEDULE PROPERTY

All that piece and parcel of the Plot/Site bearing No:6 and 7, in Old Sy No:127, New Sy No:127/7, Old M.R.No:40, New M.R.No:T98/2026-27 dated 20/06/2026, situated at Machohalli Village, Dasanapura Hobali-2, Bengaluru North Taluk, Bengaluru, same is measuring East to West 108 feet and North to South 110 feet totally measuring 11880 square feet, and bounded as follows: On the: **East by:** Survey No:122, **West by:** Road, **North by:** Site No:5 and Survey No.127/6, **South by:** Site No:08 and Sy No:127/15.

Sd/- **T.N. RAJASHEKAR**, Advocate
Off at No.06, "G" Floor, 11th Cross, Cubbonpet, Bangalore-560002.
Mob: 9620645470

ನಮೂನೆ ಸಂಖ್ಯೆ:22
ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ
ಸಾಮಾನ್ಯ ನೋಟಿಸ್
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
ಆರ್.ಎಸ್.ಎ. ನಂ: 1373/2019

ಮೇಲ್ಮನವಿದಾರರು : ಶ್ರೀ ವೆಂಕಟರಮಣಪ್ಪ (ಮೃತ)
ಇವರ ಕಾನೂನು ವಾರಸುದಾರರು
ಶ್ರೀ ವಿ ರಾಮಕೃಷ್ಣಪ್ಪ ಮತ್ತು ಇತರರು
(ಶ್ರೀ ಮಿಥುನ್.ಜಿ.ಎ.-ವಕೀಲರು)
ವಿರುದ್ಧ
ಪ್ರತಿವಾದಿಗಳು : ಮಿಥುನ್.ಜಿ.ಎ. ಮತ್ತು (ಮೃತ) ಇವರ ಕಾನೂನು ವಾರಸುದಾರರು
ಶ್ರೀ ಸಿದ್ದರಾಜು ಮತ್ತು ಇತರರು,
ಇವರಿಗೆ : ಪ್ರಸ್ತಾವಿತ ಪ್ರತಿವಾದಿ ಸಂಖ್ಯೆ:
R-2 ಶ್ರೀ ರುದ್ರಯ್ಯ (ಮೃತ)
ಇವರ ಕಾನೂನು ವಾರಸುದಾರರು,
R-2(b). ಶ್ರೀಮತಿ ಲಕ್ಷ್ಮಮ್ಮ ಬಿನ್ ಲೇಟ್ ರುದ್ರಯ್ಯ ಕೋಲ ಲೇಟ್ ನಾಗರಾಜ, ನಂ.104, ಜಕ್ಕನಹಳ್ಳಿ ಗ್ರಾಮ ಮತ್ತು ಅಂಚೆ, ತ್ಯಾಮಗೊಂಡ್ಲು ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ 562123.
ಮೇಲಿನ ಅಪೀಲುದಾರರು ಈ ಕೆಳಗಿನಂತೆ ಅರ್ಜಿಗಳನ್ನು ಸಲ್ಲಿಸಿದ್ದಾರೆ.
1. ಕಾನೂನು ವಾರಸುದಾರರ ಅರ್ಜಿ ಸಲ್ಲಿಸುವಲ್ಲಿ ಆದ 83 ದಿನಗಳ ವಿಳಂಬವನ್ನು ಮನ್ನಿಸುವ ಕುರಿತು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 1/2024.
2. ಅಬೇಟ್‌ಮೆಂಟ್ ಪ್ರಕ್ರಿಯೆಯನ್ನು ರದ್ದುಗೊಳಿಸುವ ಕುರಿತು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 2/2024.
3. ಮರಣ ಹೊಂದಿದ R - 2 ರವರ ಕಾನೂನು ವಾರಸುದಾರರನ್ನು R-2(a) ಇಂದ R-2(d) ರವರೆಗೆ ಎಂದು ದಾಖಲಿಸುವ ಕುರಿತು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 3/2024.
ಅರ್ಜಿಯನ್ನು ಏಕೆ ಪುರಸ್ಕರಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ನೀವು **ದಿನಾಂಕ 09.12.2026 ರಂದು ಬೆಳಿಗ್ಗೆ 10.30 ಗಂಟೆಗೆ** ಈ ವಿಷಯದ ಕುರಿತು ಖುದ್ದಾಗಿ ಅಥವಾ ವಕೀಲರ ಮೂಲಕ ಅಥವಾ ಈ ವಿಷಯದಲ್ಲಿ ನಿಮ್ಮ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ಹೊಂದಿರುವ ಯಾರೊಬ್ಬರ ಮೂಲಕವಾಗಲಿ ಈ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ಈ ಮೂಲಕ ನಿಮಗೆ ಸೂಚನೆ ನೀಡಲಾಗಿದೆ. ನೀವು ಹಾಜರಾಗಲು ವಿಫಲವಾದರೆ, ನಿಮ್ಮ ಅನುಪಸ್ಥಿತಿಯಲ್ಲಿ ಅರ್ಜಿಯನ್ನು ಪರಿಗಣಿಸಿ, ವಿಚಾರಣೆ ನಡೆಸಿ ತೀರ್ಮಾನಿಸಲಾಗುವುದು.
ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 28.10.2026 ರಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಾಯಕ ವಿಲೇಖನಾಧಿಕಾರಿ

PUBLIC NOTICE

My client DIVYA.G W/o Late N.S.NIthish, Resident of No.164, Doddanekkundi, Marathahalli Colony, Bangalore-560037 has reported to have lost the original Gift deed dated: 13.2.2019 executed by N.A.Somashekar Reddy in favour of N.S.Nithish, registered on 14.2.2019 as Document No.KRI-1-11844-2018-19, stored in C.D.No.KRID661 at Sub registrar office at K.R.Puram in respect of Site No.2, Khatha No.593/2, Property No.83/6, situated at Doddanekkundi, K.R.Puram Hobli, Bangalore East Taluk ward No.85 of BBMP having EPID No. 5912106621 measuring East to West 30 feet and North to South 50 feet. In this regard, complaint has been lodged through E-Lost Report on 1.11.2026 Vide, E-Lost report No 2511970/2026. If anybody finds the said document, the same may be returned to the undersigned.

H.R.MANJUNATHA, Advocate,
No.195, 3rd Floor, K.V.Shobha Enclave, Subbaramachetty Road, Basavanagudi, Bangalore-560 004
Mob: 9980740085 and 9739296688

PUBLIC NOTICE

Notice is hereby given to the genearal public, financial institutions, banks, housing societies and Goverment authorities that, my client, **Smt. D. SHREEPRIYA**, W/o. Sri. Ramacharan, No.283, 67th Cross, 5th Block, Rajajinagar, Bengaluru - 10, had executed a General Power of Attorney (GPA) dated 08.03.2007 in favor of her mother **Smt. VAIDEHI. Y.J.**, W/o. Late Sri. K. V. Dasharathy, No.57, Kamadhenu, 1st Stage, 5th phase, West of Chord Road, Bengaluru - 560 044, which was registered at the Office of the Sub-Registrar of Rajajinagar, Bengaluru as **Document No.RJN-4-00420-2006-07.**

Take notice that my client has completely and absolutely revoked, cancelled and terminated the said General Power of Attorney with effect from the date of execution of the Cancellation Deed dated 19.10.2026.

The said attorney no longer has any right, power, authority, or agency to represent my client, deal with, sell, mortgage, lease or enter into any transactions concerning my client.

The public is cautioned and advised not to deal with the said Smt. VAIDEHI. Y. J. On my behalf or on the basis of the aforementioned revoked GPA. Any transaction made by the said attorney henceforth will be illegal, unauthorized, and not binding upon my client.

AYUB KHAN KASIM, Advocate
No.66, L. M. Street, Commercial Street 2nd Cross, Bengaluru-560 001.
ayubkhank@gmail.com. Mob: 9845560377

IN THE COURT OF THE HON'BLE 9th ADDL. CITY CIVIL AND SESSIONS JUDGE AT BENGALURU (CCH-5)
P & S.C. No. 550/2026

BETWEEN: 1.Sri. Bharath L. Raju, S/o Late K.V. Lingaraju and Late Durgakala, aged about 36 years, R/at. No. 26, Sammruddhi Kempe Gowda Garden, 2nd Cross, Abbigere, Bangalore-560090. **2. Smt. Kusuma .L,** D/o Late K.V. Lingaraju, and Late Durgakala, aged about 43 years, R/at. No. 4, 1st Floor, 5th B cross, Sriram Mandir Road, Basvanagudi, Bangalore-560004. ... **PETITIONER**
AND: Nil ... RESPONDENT

PUBLIC NOTICE

The Petitioner filed petition under section 372 of the Indian Succession Act 1925, The general public hereby informed that the petitioners namely Sri. Bharath L. Raju and Smt. Kusuma L have filed above petition seeking succession certificate in respect assets of late Smt. Durgakala and authorize the Petitioner No.1 i.e Sri. Bharath L to receive/collect the amount standing to the credit of Late Smt. Durgakala under the SSS Scheme/Fixed Deposit, together with accrued interest and other benefits, from the concerned Bank in accordance with law. If any person has an objection to the said petition filed by the petitioners may submit their objection before the Hon'ble court through a person or by a pleader on the **19/12/2026** at **11:00 A.M** to answer the same, failing which the petition will be disposed an accordance with law.

SCHEDULE

Sl. No.	Bank Name	Account Number	Amount (Rs.)
1.	SBI BEL Factory Campus(10369) Bharat Electronics Limited Jalahalli, Bangalore	SSS scheme FD Account bearing No. 38973424670	Rs. 15,00,000/-

Total: Rs. 15,00,000/- (Rupees Fifteen Lakhs only), together with accrued interest and other benefits, if any.
Given under my hand and seal of this court on this 04/11/2026
By order of the Court, Senior Sheristedar, City Civil Court, Bengaluru
SRI. T. MANJUNATH, Advocate
No. 37, Flat No. 2, 3rd Floor, ASR Nest, Varanasi Main Road, TC Palya, K.R.